ಆಸ್ತಿ ತೆರಿಗೆ ನಿಗದಿ

2009 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ನಗರ ಮತ್ತು ಪುರಸಭೆಗಳ ಆಸ್ತಿ ತೆರಿಗೆಯನ್ನು ನಿಗಧಿ ಪಡಿಸಲು ನೇಮಕ ಮಾಡುತ್ತಿರುವ ಅಸೆಸ್ಸಿಂಗ್ ಆಫೀಸರ್‌ಗಳ ಕನಿಷ್ಠ ವಿದ್ಯಾರ್ಹತೆ ಏನು? ಅವರು ಯಾವ ದರ್ಜೆಯವರು?*

ಆ) *ಇವರನ್ನು ನೇಮಕ ಮಾಡುವಾಗ ಉಪಯೋಗಿಸುತ್ತಿರುವ ಮಾನ ದಂಡವೇನು?*

ಇ) *ಒಬ್ಬರೇ ಅಸೆಸ್ಸಿಂಗ್ ಆಫೀಸರನ್ನು ಪದೇ ಪದೇ ನೇಮಕ ಮಾಡುತ್ತಿರುವುದು ನಿಜವೇ? (ವಿವರ ನೀಡುವುದು)*

ಈ) *ಹಾಗಿದ್ದಲ್ಲಿ ಇದನ್ನು ತಪ್ಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?*

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ಸಚಿವರು) :

ಅ) ವ್ಯವಸ್ಥಾಪಕರು, ಕಂದಾಯಾಧಿಕಾರಿಗಳು, ಕಂದಾಯ ನಿರೀಕ್ಷಕರು, ಹಾಗೂ ಪ್ರಥಮ ದರ್ಜೆ ಸಹಾಯಕ ದರ್ಜೆಯ ಪೌರ ಸೇವಾ ನೌಕರರನ್ನು ನೇಮಿಸಲಾಗುತ್ತಿದೆ.

ಆ) ಜಿಲ್ಲಾಧಿಕಾರಿಯವರು ಶಿಫಾರಸ್ಸು ಮಾಡಿದ ಕರ ನಿರ್ಧರಣಾ ಕಾರ್ಯವನ್ನು ಈ ಹಿಂದೆ ಮಾಡದ ನೌಕರರನ್ನು ನೇಮಿಸಲಾಗುತ್ತಿದೆ.

ಇ) ಇಲ್ಲ.

ಈ) ಮೇಲಿನ (ಇ) ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಪರಿಶಿಷ್ಟ ಜಾತಿಯವರಿಗೆ ಮನೆ ಕಟ್ಟಲು ನೀಡಿದ ಹಣ

2010 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಸಮಾಜ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1997-98ನೇ ಸಾಲಿನಲ್ಲಿ ರಾಜ್ಯದಲ್ಲಿ ಅಂಬೇಡ್ಕರ್ ಜನ್ಮ ಶತಾಬ್ದಿ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿಯವರಿಗೆ ರೂ.16,000.00ಗಳನ್ನು ಮನೆ ಕಟ್ಟಲು ಸಾಲ ಕೊಟ್ಟಿರುವುದು ನಿಜವಲ್ಲವೇ?*

ಆ) *1994-95ನೇ ಇಸವಿ ನಂತರ ಇದೇ ಹಣವನ್ನು ಸಾಲದ ರೂಪದಲ್ಲಿ ಕೊಡದೇ ಸಹಾಯಧನ ಅಂತ ಮಂಜೂರು ಮಾಡಿರುವುದು ನಿಜವಲ್ಲವೇ?*

ಇ) *ನಿಜವಾದಲ್ಲಿ ಈ ದ್ವಿಮುಖ ನೀತಿ ಅನುಸರಿಸಲು ಕಾರಣವೇನು? 92-93ನೇ ಸಾಲಿನಲ್ಲಿ ಮೇಲ್ಕಂಡ ಯೋಜನೆಯಲ್ಲಿ ಕೊಟ್ಟ ಹಣವನ್ನು ಸಹಾಯಧನವೆಂದು ಘೋಷಣೆ ಮಾಡಿ ಋಣಮುಕ್ತರನ್ನಾಗಿ ಮಾಡಲಾಗುವುದೇ? (ವಿವರ ನೀಡುವುದು)*

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು) :

ಅ) ಇಲ್ಲ

ಆ) ಹೌದು.

ಇ) ಉದ್ಭವಿಸುವುದಿಲ್ಲ.

ಉತ್ತರ ಕನ್ನಡ ಜಿಲ್ಲೆಯಲ್ಲಿ ರೇಷ್ಮೆ ಕೃಷಿ ಉತ್ತಮ ಪಡಿಸುವುದು

2011 - ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲಾ) : ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ರೇಷ್ಮೆ ಕೃಷಿ ಉತ್ತಮ ಪಡಿಸಲು ಯಾವ ಯೋಜನೆ ಹಮ್ಮಿಕೊಂಡಿದೆ ?

ಆ) ಉತ್ತರ ಕನ್ನಡ ಜಿಲ್ಲೆಯಲ್ಲಿ ಕಳೆದ ಮೂರು ನಾಲ್ಕು ವರ್ಷಗಳಲ್ಲಿ ರೇಷ್ಮೆ ಕೃಷಿ ಕಡಿಮೆಯಾಗಲು ಕಾರಣವೇನು ?

ಇ) ಹಿಂದೆ ಉತ್ತರ ಕನ್ನಡ ಜಿಲ್ಲೆಯ ಸಿಸಿ ಯಲ್ಲಾಪುರ ತಾಲ್ಲೂಕಿನಲ್ಲಿ ಉತ್ತಮ ಬೆಳೆಯಾಗುತ್ತಿದ್ದರೂ ರೈತರಿಗೆ ಈಗ ಅದರ ಬಗ್ಗೆ ಹೆಚ್ಚಿನ ಆಸಕ್ತಿ ಕುಂಠಿತವಾಗಲು ಕಾರಣವೇನು ?

ಈ) ಸರ್ಕಾರ ರೈತರಲ್ಲಿ ಮತ್ತೆ ಆಸಕ್ತಿ ಮೂಡಿಸಲು ಯಾವ ಯೋಜನೆಯನ್ನು ಹಮ್ಮಿಕೊಂಡಿದೆ ?

ಉ) 1994-95ರಿಂದ ಉತ್ತರ ಕನ್ನಡ ಜಿಲ್ಲೆಯಲ್ಲಿ ಇಲ್ಲಿಯ ತನಕ ಎಷ್ಟು ಕ್ಷೇತ್ರದಲ್ಲಿ ರೇಷ್ಮೆ ಬೆಳೆಯುತ್ತದೆ ? (ತಾಲ್ಲೂಕುವಾರು ವಿವರ ನೀಡುವುದು)

ಶ್ರೀ ಎಂ. ವರದೇಗೌಡ (ರೇಷ್ಮೆ ರಾಜ್ಯ ಸಚಿವರು) :

ಅ) ಕಾರ್ಯಕ್ರಮಗಳೇನೆಂದರೆ

1. ಕರ್ನಾಟಕ ರಾಜ್ಯ ರೇಷ್ಮೆ ಅಭಿವೃದ್ಧಿ ಮತ್ತು ಸಂಶೋಧನಾ ಸಂಸ್ಥೆಗೆ ಸಹಾಯ ಅನುದಾನ.
2. ವಿಶೇಷ ಘಟಕ ಯೋಜನೆಯಡಿಯಲ್ಲಿ ರೇಷ್ಮೆ ವ್ಯವಸಾಯದಾರರಿಗೆ ಸಹಾಯ ಧನ ಪ್ರೋತ್ಸಾಹ ಧನ.
3. ಮೈಸೂರು ಬಿತ್ತನೆ ಪ್ರದೇಶದಲ್ಲಿ ರೇಷ್ಮೆ ಗೂಡು ಉತ್ಪಾದನೆಗೆ ಬೋನಸ್
4. ರೋಗ ಮತ್ತು ಹೂಜಿ ನಿಯಂತ್ರಣ.
5. ಬೈವೋಲ್ಟಿನ್ ರೇಷ್ಮೆ ಹುಳು ಸಾಕಾಣಿಕೆದಾರರಿಗೆ ಮತ್ತು ರೀಲರುಗಳಿಗೆ ಉತ್ತೇಜನ.
6. ಪ್ರಚಾರ, ವಸ್ತು ಪ್ರದರ್ಶನ, ಅಧ್ಯಯ, ಪ್ರವಾಸ, ಪುಸ್ತಕಗಳು, ನಿಯತಕಾಲಿಕಗಳು.